**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.1192/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸ್ ಸೇಡಂ

-ಃಃ ವಿರುದ್ದ ಃಃ-

ಆರೋಪಿ ಃ ರವಿ ತಂದೆ ಮೌಳೇಶ ವಡ್ಡರ
ವಃ 32 ವರ್ಷ, ಉಃ ಕೂಲಿ
ಸಾಃ ಜನತಾ ಕಾಲೋನಿ, ಹೂಡಾ ,
ತಾಃ ಸೇಡಂ, ಜಿಃ ಕಲಬುರಗಿ

----

**ದೋಷಾರೋಪಣೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 07-12-2020 ರಂದು ಸಮಯ ಸಾಯಂಕಾಲ 05.30 ಗಂಟೆ ಸುಮಾರಿಗೆ ಗ್ರಾಮ ಪಂಚಾಯತಗಳ ಸಾರ್ವತ್ರಿಕ ಚುನಾವಣೆ-2020 ರ ನಿಮಿತ್ಯ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವ ಪ್ರಯುಕ್ತ ಸಿಬ್ಬಂದಿ ಹಾಗೂ ಪಂಚರೊಂದಿಗೆ ಅಬಕಾರಿ ಅಕ್ರಮಗಳನ್ನು ಪತ್ತೆ ಹಚ್ಚಲು ಸೇಡಂ ತಾಲೂಕಿನ ಹೂಡ ಗ್ರಾಮದ ಜನತಾ ಕಾಲೋನಿಯಲ್ಲಿ ಗಸ್ತು ಕಾರ್ಯನಿರ್ವಹಿಸುತ್ತಿರುವಾಗ ರವಿ ತಂದೆ ಮೌಳೇಶ ವಡ್ಡರ ಇವರ ಮನೆ ವೇಲೆ ಅಬಕಾರಿ ದಾಳಿ ಮಾಡಿ ಶೋಧನೆ ಮಾಡಿದಾಗ ಮನೆಯ ಒಳಗಡೆಯ ಒಂದು ಕೋಣೆಯ ಬಲಗಡೆ ಮೂಲೆಯಲ್ಲಿ ಮೂರು ರಟ್ಟಿನ ಪೆಟ್ಟಿಗೆಗಳು ಕಂಡು ಬಂದವು ನಂತರ ಅವುಗಳನ್ನು ತೆಗೆದು ನೋದಡಾಗ ಓರಿಜಿನಲ್ ಚಾಯ್ಸ ವಿಸ್ಕಿ 90 ಎಂ ಎಲ್ ನ ಒಟ್ಟು 257 ಟೆಟ್ರಾಪ್ಯಾಕಗಳು ಕಂಡು ಬಂದಿದ್ದು ಅಂದರೆ ಒಟ್ಟು 23.130 ಲೀ ಮದ್ಯ ಸಂಗ್ರಹಿಸಿಟ್ಟಿದ್ದು ಕಂಡು ಬಂದದ್ದು ಸದರಿ ಮದ್ಯವನ್ನು ಜಪ್ತಿ ಮಾಡಿದ್ದು, ಸದರಿ ಮದ್ಯವು ಐಎಸ್ಐ ಧೃಢಿಕರಣ ಹೊಂದಿದ್ದು, ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38(A), 40 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 07-03-2026 ಪ್ರ.ದ.ನ್ಯಾ.ದಂ. ಸೇಡಂ.

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.1192/2021</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸ್ ಸೇಡಂ

-ಃಃ ವಿರುದ್ದ ಃಃ-

ಆರೋಪಿ ಃ ರವಿ ತಂದೆ ಮೌಳೇಶ ವಡ್ಡರ
ವಃ 32 ವರ್ಷ, ಉಃ ಕೂಲಿ
ಸಾಃ ಜನತಾ ಕಾಲೋನಿ, ಹೂಡಾ ,
ತಾಃ ಸೇಡಂ, ಜಿಃ ಕಲಬುರಗಿ

**<u>ಆರೋಪಿತರ ಹೇಳಿಕೆ</u>**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೊ ಅಥವಾ ವಿಚಾರಣೆ ನಡೆಯಬೇಕಾ?

ಉಃ

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 07-03-2026 ಪ್ರ.ದ.ನ್ಯಾ.ದಂ. ಸೇಡಂ.